Sri K. H. PATIL.—I Will try to do my best.

ಶ್ರೀ ಕೆ. ಎಚ್. ಹನುಮೇಗೌಡ.— ಸ್ವಾಮಿ, ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀ ಸೀತಾರಾಮರೆಡ್ಡಿಯವರು, ಆರಕೆರೆಯವರು ಸೇರಿ ಒಟ್ಟು ೫ ಜನರ ಒಂದು ಕಮಿಟಿ ಮಾಡಿದ್ದರು. ಆ ಕಮಿಟಿಯವರು ಈ ಬಗ್ಗೆ ಏನು ವರದಿ ಕೊಟ್ಟಿದ್ದಾರೆ ?

ಶ್ರೀ ಕೆ. ಎಚ್. ಪಾಟೀಲ.—ನೋಟೀಸ್.

ಶ್ರೀ ಎ. ಶರಣಪ್ಪ.—ಸ್ವಾಮಿ, ಜಗಜೀವನರಾಮು ಮಂತ್ರಿಗಳಾಗಿದ್ದಾಗ ಆ ಕಾಲದಲ್ಲೇ ಇದನ್ನು ಅಗ್ರಿಕಲ್ಚರಲ್ ಇಂಜನೀಯರಿಂಗ್ ಕಾಲೇಜು ಮಾಡುತ್ತೇವೆ ಎಂದು ಘೋಷಣೆ ಹೊರಡಿಸಿದರು. ತದನಂತರ ಅದರ ಹೆಸರನ್ನು ಬದಲಾವಣೆ ಮಾಡಿದರು. ಈಗ ಇದು ಇಷ್ಟು ವಿಳಂಬವಾಗುವುದಕ್ಕೆ ಕಾರಣ ಏನು ?

ಶ್ರೀ ಕೆ. ಎಚ್. ಪಾಟೀಲ.—ಅಂದಿನ ಸರ್ಕಾರದ ಅನಾಸಕ್ತಿ ಮತ್ತು ಧೋರಣೆಯೇ ಕಾರಣ.

Sri S. A. PATIL.—Is it the intention of the Government to convert all the polytechnic schools into colleges in the State ?

Sri K. H. PATIL.—That is not so. But looking to the trend of the people and the desire of the people there we would like to give them an agriculture college, preferably an agricultural engineering college so that it will benefit more people.

BUNDING OF SOUTHERN BRANCH OF KRISHNA RIVER

872. Sri A. SHARANAPPA (Deodurg).—

Will the Minister for Public Works and Electricity be pleased to state :—

a) whether it is a fact that the inhabitants of the villages Handhinal, Kadadarguddi, Yelgundi, Yergodi, Gonwantla and Guntagola are put to great hardship since two years due to the bunding of Southern Branch of Krishna river near Hirejawoor village in Lingsugur Raichur District, and as a result of which the flow of water has been completely closed ;

b) whether the Government has received any representation in this respect; if so, the action the Government has taken;

c) whether there is any proposal to divert a portion of water from North branch of Krishna river to that of Southern branch and to provide water facility by booring expenditure under 64 Famine or under some other head;

d) whether they intend to direct the Upper Krishna Project authorities to provide one or two near Jawoor village and let out the water to the Southern Branch in order to supply water?

Sri H. M. CHANNABASAPPA (Minister for Public Works and Electricity).—

a) Flow in the river near these villages has not been affected by the construction of the southern branch of Upper Krishna Dam.

b) Representations have been received. No action is required as explained in reply to question (a) above.

c) No.

d) There is no such proposal.

ಶ್ರೀ ಎ. ಶರಣಪ್ಪ.—ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಹಿರೇ ಜೇವೂರ ಗ್ರಾಮದ ಬಳಿ ಕೃಷ್ಣಾ ನದಿಯ ದಕ್ಷಿಣ ಶಾಖೆಗೆ ಒಡ್ಡನ್ನು ನಿರ್ಮಿಸಿದುದರ ಪರಿಣಾಮದಿಂದಾಗಿ ನೀರು ಹರಿಯುವುದು ಸಂಪೂರ್ಣವಾಗಿ ನಿಂತು ಹೋಗಿದ್ದು ಕಳೆದ ೨ ವರ್ಷಗಳಿಂದ ಸುಮಾರು ೮–೧೦ ಗ್ರಾಮಗಳ ನಿವಾಸಿಗಳಿಗೆ ಬಹಳ ತೊಂದರೆಗೀಡಾಗಿರುವುದು ನಿಜವೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ. ಈಗ ಇದನ್ನು ನಿರ್ದಿಷ್ಟವಾಗಿ ನೋಡಿದರೆ ಅಲ್ಲಿ ಸುಣ್ಣಕಲ್ ಹೊಳೆ ನೀರು ಏನು ಹರಿಯುತ್ತದೋ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅಲ್ಲೂ ನೀರು ಇಲ್ಲದಂತಾಗಿದೆ. ಆದುದರಿಂದ ಆ ಗ್ರಾಮದ ನಿವಾಸಿಗಳಿಗೆ ನೀರನ್ನು ಕೊಡುವುದಕ್ಕೆ ಏನಾದರೂ ಬೇರೆ ಒಂದು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

†ಎಚ್. ಎಂ. ಚನ್ನಬಸಪ್ಪ.—ಈಗ ಕೃಷ್ಣಾ ನದಿಯ ದಕ್ಷಿಣ ಭಾಗದಲ್ಲಿ ಡ್ಯಾಮ್ ಕಟ್ಟೋಣವಾಗುವುದರಿಂದ ಅಲ್ಲಿನ ಜನರಿಗೆ ತೊಂದರೆಯಾಗುತ್ತದೆ ಎಂದು ಮಾನ್ಯ ಸದಸ್ಯರು ತಿಳಿದುಕೊಂಡಿದ್ದರೆ ಅದು ತಪ್ಪು ಅಭಿಪ್ರಾಯ. ಅಲ್ಲಿ ಸುಣಕಲ್

ಹೊಳೆ ಏನು ಇತ್ತು ಆ ನೀರು ದಕ್ಷಿಣ ಭಾಗಕ್ಕೆ ಹರಿದು ಹೋಗುತ್ತದೆ. ಈಗ ಕೃಷ್ಣಾ ನದಿಯಲ್ಲೂ ಕೂಡ ನೀರು ಒಣಗಿ ಹೋಗಿದೆ ಮತ್ತು ಸುಣಕಲ್ ಹೊಳೆಯಲ್ಲೂ ಕೂಡ ನೀರು ಒಣಗಿ ಹೋಗಿರುವುದರಿಂದ ಈ ಅಭಾವ ಪರಿಸ್ಥಿತಿ ಉಂಟಾಗಿದೆ.

೧—೩೦ ಪಿ. ಎಂ.

ಶ್ರೀ ಎ. ಶರಣಪ್ಪ.—ಸುಣಕಲ್ ಹೊಳೆಯಲ್ಲಿ ಮಳೆಗಾಲದಲ್ಲಿ ಮಾತ್ರ ನೀರಿದ್ದು ಬೇಸಿಗೆಯಲ್ಲಿ ಬತ್ತುತ್ತದೆ. ಕೃಷ್ಣಾ ನದಿಯಲ್ಲಿ ಕ್ರಮೇಣವಾಗಿ ನೀರು ಬರುತ್ತದೆ. ಈ ಡ್ಯಾಂ ಕಟ್ಟುವುದರಿಂದ ನೀರು ಬರುವುದು ನಿಂತು ಹೋಗಿ ಇತ್ತಕಡೆ ದಂಡೆಗೆ ನೀರು ಸಿಕ್ಕದ ಹಾಗೆ ಆಗಿದೆ. ತಜ್ಞರನ್ನು ಕೇಳಿ, ಪುನಃ ಪರಿಶೀಲಿಸಿ ಪರಿಹಾರ ಏನು ತೆಗೆದುಕೊಳ್ಳಬೇಕೆಂಬುದನ್ನು ವಿಚಾರಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂಜಿನಿಯರುಗಳ ಸಂಗಡ ಆಲೋಚನೆ ಮಾಡಿಯೇ ನಾನು ಉತ್ತರ ಕೊಡುತ್ತಿರುವುದು. ಈಗ ಕೃಷ್ಣಾ ನದಿಗೆ ನಾರಾಯಣ ಪುರದ ಬಳಿ ಡ್ಯಾಂ ಪೂರ್ಣವಾಗಿ ಕಟ್ಟಿದಮೇಲೆ ಈ ಹಳ್ಳಿಗಳಿಗೆ ನೀರು ಒದಗಿಸ ತಕ್ಕದ್ದು ಸುಲಭವಾಗುತ್ತದೆ. ಆ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತದೆ.

MISBEHAVIOUR OF DOCTORS IN BIJAPUR CIVIL HOSPITAL

474. Sri J. L. KABADE (Ballolli).—Will the Minister for Health be pleased to state :—

(*a*) the names of the Doctors working in Civil Hospital, Bijapur for the last four to five years; the date and year in which they have joined the service;

(*b*) of them, the Doctors who behaved roughly and rudely with the patients and also assaulted them;

(*c*) the number of Doctors against whom the Civil Surgeon, Bijapur has reported to the Government for taking disciplinary action and when;

(*d*) whether it is a fact that citizens of Bijapur went in a procession to the hospital to protest against the assault and rude behaviour of Doctors with patients and puerperal women with intention to gherao;

(*e*) whether it has come to the notice of the Government that the Minister for Municipal Administration went to the house of the Doctor for tea party on 26th August 1972 who had been transferred in the interest of administration;